Kerala Gazette No. 31 dated 4th August 2020.

**PART I** **Section iii**

# ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಫ್) ಇಲಾಖೆ

## ಅಧಿಸೂಚನೆ

*2018 ಏಪ್ರಿಲ್ 7,*

ನಂಬ್ರ 24395/ಲೆಗ್. ಎಫ್2/2017/ಕಾನೂನು. *ತಿರುವನಂತಪುರಂ,* *1193 ಮೀನ 24/*

*1940 ಚೈತ್ರ 17.*

2018 ಏಪ್ರಿಲ್ 7ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 21ನೇ ನಂಬ್ರ ಅಧ್ಯಾದೇಶ

## 2018ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದು.

2003ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

**ಪೀಠಿಕೆ.**—2017ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ (ತಿದ್ದುಪಡಿ) ಅಧ್ಯಾದೇಶ (2017ರ 27)ವನ್ನು 2017 ಡಿಸೆಂಬರ್ 7ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದರಿಂದಲೂ;

2018 ಜನವರಿ 22ನೇ ದಿನಾಂಕದಂದು ಆರಂಭವಾಗಿ 2018 ಫೆಬ್ರವರಿ 7ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶಕ್ಕೆ ಬದಲಾಗಿ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು 14ನೇ ಕೇರಳ ವಿಧಾನಸಭೆಯ 92ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸುವುದಕ್ಕಾಗಿ 2018ರ ಕೇರಳ ನೀರಾವರಿ ಮತ್ತು ಜಲಸಂರಕ್ಷಣೆ (ತಿದ್ದುಪಡಿ) ಅಧ್ಯಾದೇಶ (2018ರ 19)ವನ್ನು 2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದರಿಂದಲೂ;

2018 ಫೆಬ್ರವರಿ 26ನೇ ದಿನಾಂಕದಂದು ಆರಂಭವಾಗಿ 2018 ಏಪ್ರಿಲ್ 4ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶಕ್ಕೆ ಬದಲಾಗಿ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು 14ನೇ ಕೇರಳ ವಿಧಾನಸಭೆಯ 110ನೇ ನಂಬ್ರ ಮಸೂದೆಯಾಗಿ ಪ್ರಕಟಿಸಿದ್ದರೂ, ಅದನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ (ಎ) ಉಪ-ಖಂಡದ ಪ್ರಕಾರ 2018ರ ಕೇರಳ ನೀರಾವರಿ ಮತ್ತು ಜಲಸಂರಕ್ಷಣೆ (ತಿದ್ದುಪಡಿ) ಅಧ್ಯಾದೇಶ (2018ರ 19)ವು ಅಧ್ಯಾದೇಶವು 2018 ಏಪ್ರಿಲ್ 9ನೇ ದಿನಾಂಕದಂದು ಜಾರಿಯಲ್ಲಿಲ್ಲದಾಗುವುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸದಿದ್ದಲ್ಲಿ ತೊಂದರೆಗಳು ಉಂಟಾಗ ಬಹುದಾದುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲು ಮತ್ತು ತಾನು ತ್ವರಿತ ಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುವರು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017 ಡಿಸೆಂಬರ್ 8ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ತಾತ್ಕಾಲಿಕವಾಗಿ ತಿದ್ದುಪಡಿ ಮಾಡಬೇಕಾದ 2003ರ 31ನೇ ಅಧಿನಿಯಮ.—ಈ ಅಧ್ಯಾದೇಶವು ಜಾರಿಯಲ್ಲಿರುವ ಕಾಲಾವಧಿಯಲ್ಲಿ, 2003ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ ಅಧಿನಿಯಮ (2003ರ 31) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3ರಿಂದ 8ರ ವರೆಗಿನ ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗೆ ವಿಧೇಯವಾಗಿ ಪ್ರಾಬಲ್ಯವಿರುವುದಾಗಿದೆ.

3. 37ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 37ನೇ ವಿಭಾಗದಲ್ಲಿ ಉಪ-ವಿಭಾಗ (3)ರ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) ಯಾವುದೇ ವ್ಯಕ್ತಿಯು ಜಲ ವಿತರಣಾ ವ್ಯವಸ್ಥೆಗೆ ಅಥವಾ ಜಲ ಪ್ರವಾಹಕ್ಕೆ ತ್ಯಾಜ್ಯವನ್ನೊ ಅಥವಾ ಹೊಲಸನ್ನೊ ಅಥವಾ ಮಲವನ್ನೊ ಹಾಕುವುದೊ ಅಥವಾ ಅದಕ್ಕೆ ಕೊಳಚೆ ನೀರನ್ನು ಹರಿಯಬಿಡುವುದೊ ಅಥವಾ ಯಾವುದೇ ಇತರ ರೀತಿಯಲ್ಲಿ ನೀರನ್ನು ಮಲಿನಮಾಡುವುದೊ ಮಾಡತಕ್ಕದ್ದಲ್ಲ.".

4. 58ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 58ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ, (ಜೆ) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಕೆ) ಸರಕಾರ ನಾಮನಿರ್ದೇಶಿತ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಅವರ ಪದವಿಗಿಂತ ಕಡಿಮೆಯಲ್ಲದ ಒಬ್ಬ ಪೋಲೀಸ್ ಅಧಿಕಾರಿ.".

5. 59ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 59ನೇ ವಿಭಾಗದ (2)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ಪ್ರಾಧಿಕಾರದ ಒಂದು ಸಭೆಯ ಕ್ವಾರಂ ಚೇರ್‌ಮೇನನ್ನು ಒಳಗೊಂಡು ನಾಲ್ಕು ಸದಸ್ಯರಾಗಿರತಕ್ಕದ್ದು.".

6. 70ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 70ನೇ ವಿಭಾಗದ (3)ನೇ ಉಪ-ವಿಭಾಗದ ಬದಲು, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(3) 7ನೇ ವಿಭಾಗ ಅಥವಾ 37ನೇ ವಿಭಾಗದ (3)ನೇ ಉಪ-ವಿಭಾಗ ಅಥವಾ (4)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯನ್ನು, ಅಪರಾಧ ನಿರ್ಣಯತಿಯ ಮೇರೆಗೆ ಮೂರು ವರ್ಷಗಳ ಕಾಲಾವಧಿ ವರೆಗಿನ ಜೈಲು ಶಿಕ್ಷೆ ಅಥವಾ ಎರಡು ಲಕ್ಷ ರೂಪಾಯಿ ವರೆಗಿನ ದಂಡ ವಿಧಿಸಿ ಅಥವಾ ಅವೆರಡನ್ನೂ ಸೇರಿಸಿ ವಿಧಿಸಿ ಶಿಕ್ಷಿಸಲ್ಪಡತಕ್ಕದ್ದು.".

7. 70ಎ ಎಂಬ ಹೊಸ ವಿಭಾಗದ ಸೇರಿಸುವಿಕೆ.—ಪ್ರಧಾನ ಅಧಿನಿಯಮದ 70ನೇ ವಿಭಾಗದ ನಂತರ, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"70ಎ. ಮ್ಯಾಜಿಸ್ಟ್ರೇಟ್ ಅವರ ವಿಶೇಷ ಅಧಿಕಾರ ವ್ಯಾಪ್ತಿ.—1973ರ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (1974ರ 2ನೇ ಕೇಂದ್ರ ಅಧಿನಿಯಮ)ಯ 29ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ ಪ್ರಕಾರದ ಅಪರಾಧಗಳಿಗೆ ಎರಡು ಲಕ್ಷ ರೂಪಾಯಿಗಳ ವರೆಗಿನ ದಂಡವನ್ನು ವಿಧಿಸುವ ಅಧಿಕಾರ ಒಂದು ಜುಡಿಶಿಯಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರರಿಗೆ ಇರುವುದಾಗಿದೆ.".

8. 72ನೇ ವಿಭಾಗಕ್ಕಿರುವ ತಿದ್ದುಪಡಿ.—ಪ್ರಧಾನ ಅಧಿನಿಯಮದ 72ನೇ ವಿಭಾಗದ (ಸಿ) ಖಂಡದಲ್ಲಿ "ಎರಡು ವರ್ಷಗಳು, ಆದರೆ ಅದು ಆರು ತಿಂಗಳಿಗಿಂತ ಕಡಿಮೆಯಲ್ಲದ ಮತ್ತು ಮೂವತ್ತೈದು ಸಾವಿರ ರೂಪಾಯಿ ವರೆಗಿನ ದಂಡದೊಂದಿಗೆ" ಎಂಬ ಪದಗಳ ಹಾಗೂ ಚಿಹ್ನೆಗಳ ಬದಲು "ಮೂರು ವರ್ಷಗಳು, ಆದರೆ ಅದು ಒಂದು ವರ್ಷಕ್ಕಿಂತ ಕಡಿಮೆಯಲ್ಲದ ಮತ್ತು ಎರಡು ಲಕ್ಷ ರೂಪಾಯಿವರೆಗಿನ ದಂಡದೊಂದಿಗೆ" ಎಂಬ ಪದಗಳನ್ನು ಹಾಗೂ ಚಿಹ್ನೆಗಳನ್ನು ಸೇರಿಸತಕ್ಕದ್ದು.

9. ರದ್ಧತಿ ಮತ್ತು ರಕ್ಷಣೆ.—(1) 2018ರ ಕೇರಳ ನೀರಾವರಿ ಮತ್ತು ಜಲ ಸಂರಕ್ಷಣೆ (ತಿದ್ದುಪಡಿ) ಅಧ್ಯಾದೇಶ (2018ರ 19)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯಲ್ಲಿ ಏನೇ ಒಳಗೊಂಡಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.